77

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 5.

ಬೆಂಗಳೂರು, ಗುರುವಾರ, ಫಿಬ್ರವರಿ ತಾ॥ 6, ಸ್ 1896.

IIನೇ ಭಾಗ.

ಇಂಡ್ಯ ಗವರ್ನ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಟಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸರ ಡಿಟೋ	„ 170
1	ಮದ್ರಾಸ್ ಓಕ್ಸರವರ ಡಿಟೋ	„ 250
1	ಡಿಟೋ ಡಿಟೋ ಡಿಟೋ	„ 188
1	ಡಿಟೋ ಬೋರ್ರ್ಯಾಪರವರ ಡಿಟೋ	„ 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವವು.

ಯಲ್. ರಿಕ್ಕೆಟ್ಸ್, ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಇನಾಂ ಇಲಾಖಾ.

ಇಸ್ತಿಹಾರ್‌ನಾಮೆ.

(ನಂ. 5) ತಾರೀಖು 17—18 ಜನವರಿ 1896.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಲೇಟ್ ಅತ್ತಿ ಕುಪ್ಪ ಹಾಲಿ ಕೃಷ್ಣರಾಜಪ್ಯಾಟೆ ತಾಲ್ಲೂಕಿನಲ್ಲಿ ಇರತಕ್ಕ ಚಿಲ್ಲರೆ ಇನಾಂಗಳಬಾಬತು (618) ಫೈನಲ್ ಟೈಟಲ್ ಡೀಡ್ ಯಾನೆ ಕಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವೆ.

2. ಸದರೀ ತಾಲ್ಲೂಕಿನ ಅಮಲ್ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸುಗಳು ಬಂದ ಮೇಲೆ ಅವುಗಳನ್ನು ತೆಗೆದುಕೊಳ್ಳುವ ಬಗ್ಗೆ ಸದರೀ ಇನಾಂದಾರರು ಖರ್ಚ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರರು ಅಂಥಾ ನೋಟೀಸುಗಳನ್ನು ಜಾರಿ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಚಿಲ್ಲರೆ ಇನಾಂಗಳ ಬಗ್ಗೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದುಮಾಡಲ್ಪಟ್ಟಿಯಿರುತ್ತೆಂದು ಇದರ ಲೆಖ್ಖಿಯಿಂದ ಪ್ರಕಟಿಸಲ್ಪಟ್ಟಿಯಿರುತ್ತೆ.

ಮೈಸೂರ್ ರೆವಿನ್ಯೂ ಸರ್ವೆ ಮತ್ತು ಸೆಟಲ್‌ಮೆಂಟ್ ಇಲಾಖಾ.

ನಂ. 839. ತಾರೀಖು 4ನೇ ಫೆಬ್ರುವರಿ ಸನ 1896.

ಸಮಸ್ತ ಜನಗಳಿಗೂ ತಿಳಿಯುವದಕ್ಕೋಸ್ಕರ ಇದರಿಂದ ಪ್ರಕಟಿಸಲ್ಪಡುವದೇನಂದರೆ,—ಮೈಸೂರ್ ಡಿಸ್ಟ್ರಿಕ್ಟು ಎಳಂದೂರ್ ಜಹಗೀರಿನ ರೆವಿನ್ಯೂ ಸರ್ವೆ ಸೆಟ್ಲಮೆಂಟ್‌ಯಾನೆ ತರಂ ಜಮಾಬಂದಿಯು ಸನ 1896ನೇ ಇಸವಿ ಫೆಬ್ರುವರಿ 20ನೇ ತಾರೀಖಿಗೆ ಅಥವಾ ಆ ಷುಮಾರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ಪಿ. ಗ್ರ್ಯಾಂಟ್,
ಇನಾಂ ಮತ್ತು ರೆ॥ ಸರ್ವೆ ಸೂಪರಿಂಟೆಂಡೆಂಟ್.

ತುಮಕೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 16ನೇ ಜನವರಿ 1896ನೇ ಇಸವಿ.

ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ 1889ನೇ ಇಸವಿ 6ನೇ ನಂಬರ್ ಸರಕ್ಯುಲರ್ ಹುಕುಂ ಪ್ರಕಾರ ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಸಬ್ ಡಿ॥ ಬಾಬತು ಈ ಕೆಳಗೆ ನಮೂದಾಗುವ ದಸ್ತೈವಜುಗಳು 1895ನೇ ಇಸವಿ ಡಿಸೆಂಬರ್ ಆಖೈರ್ ವರಿಗೆ ಬೇವಾರಸಾಗಿರುವದ್ದರಿಂದ ನಾಶಮಾಡಲ್ಪಡುವದು.

ಸಬ್ ಡಿಸ್ಟ್ರಿಕ್ಟು	ನಂಬರು ಮತ್ತು ತಾರೀಖು.	ದಸ್ತೈವಜಿನ ತಾರೀಖು.	ರಿಜಿಸ್ಟ್ರಾದ ತಾರೀಖು.	ಬರದುಕೊಟ್ಟವರ ಹೆಸರು.	ಬರಸಿಕೊಂಡವರ ಹೆಸರು.	ದಸ್ತೈವಜಿನ ಸ್ವಭಾವ.	ಷರಾ.
ತುಮಕೂರು	561 / 1892—93	8— 1—93	14— 3—93	ರುದ್ರಪ್ಪನ ಹೆಂಡತಿ ಕಿದ್ದಮ್ಮ	ವೀರಪ್ಪಶಾಸ್ತ್ರಿ	ಕ್ರಯ 95 ರೂಪಾಯಿಗೆ ಪರಿವರ್ತನೆ	1896ನೇ ಇಸವಿ ಫೆಬ್ರುವರಿ ಆಖೈರು ವಾಯಿದೆ ತೆಗೆದುಕೊಳ್ಳದ ಪಕ್ಷದಲ್ಲಿ ನಾಶ ಪಡಿಸಲ್ಪಡುತ್ತೆ.
ಡಿಟೋ	10 / 1893—94	5— 7—93	5— 7—93	1ನೇ ಫಕರುದ್ದೀನಸಾಬಿ 2ನೇ ಗುಲಾಂ ಮೊಹಿದ್ದೀನ್ ಹದೀನಸಾಬಿ	1ನೇ ಶಿಲೇಮಾನಸಾಬಿ 2ನೇ ಹಸನಸಾಬಿ	50 ರೂಪಾಯಿನ ಕಿಮ್ಮತ್ತಿನ ಸ್ಥಿತಿಗಳಿಗೆ	
ಡಿಟೋ	124 / 1893—94	5— 8—93	26— 8—93	ಕಿದ್ದಹೊನ್ನಯ್ಯ ಮೈನರ ಗಾರ್ಡಿಯನ್ ತಾಯಿ ಕಿದ್ದನಂಜಮ್ಮ	ಶಾಮರಾವ್	ಕ್ರಯ 15 ರೂಪಾಯಿಗಳಿಗೆ	
ಗುಬ್ಬಿ	91 / 1892—93	20— 6—92	27— 6—92	ರಂಗಯ್ಯ	ವೆಂಕಮ್ಮ	ಕ್ರಯ 200 ರೂಪಾಯಿಗಳಿಗೆ	
ಡಿಟೋ	232 / 1893—94	14—12—93	20—12—93	ವೆಂಕಟರಮಣಶೆಟ್ಟಿ	ಕೂರಪ್ಪ	ಕ್ರಯ 130 ರೂಪಾಯಿಗೆ	
ಕುಣಿಗಲ್	108 / 1892—93	8— 4—92	8— 6—92	ರಾಮಯ್ಯ	ರಂಗಣ್ಣ	ಕ್ರಯ 50 ರೂಪಾಯಿಗೆ	
ಡಿಟೋ	119 / 1892—93	19— 6—92	21— 6—92	ಲಕ್ಕ	ರಾಮ	ಕ್ರಯ 32 ರೂಪಾಯಿಗೆ	
ಡಿಟೋ	468 / 1892—93	17— 3—93	17— 3—93	ಲಿಂಗಪ್ಪಯ್ಯ	ಗುಂಡಪ್ಪ	ಭೋಗ್ಯ 75 ರೂಪಾಯಿಗೆ	
ಡಿಟೋ	563 / 1892—93	25— 5—93	25— 5—93	ಉಸ್ಮಾನಸಾಬಿ	ಲಿಂಗಣ್ಣ	ಗೇಣೀಚೀಟು 3 ವರುಷಗಳಿಗೆ	

ಎಂ. ನಾರಾಯಣರಾವ್, ಡಿಸ್ಟ್ರಿಕ್ಟು ರಿಜಿಸ್ಟ್ರಾರ್.